



ಮೀನಾಕ್ಷಿಯು ಭದ್ರಪ್ಪನ ಕಿರಾಣಿ ಅಂಗಡಿ ಬಾಗಿಲಿಗೆ ಬಂದದ್ದೇ ತಡ ಗಲ್ಲಾದ ಮೇಲೆ ಟೆಂಪರರಿಯಾಗಿ ಕುಂತಿದ್ದ ಭದ್ರಪ್ಪನ ಮಗ ಶೇಕ್ರಿಗೆ ಹಗಲಿಗೆ ಬೆಳದಿಂಗಳು ಹರಡಿದಂತಾಗಿ ರೋಮಾಂಚನವಾಯಿತು. ಸಕಲ ಸೌಭಾಗ್ಯಗಳೂ ಅವನ ಕಣ್ಣಳತೆಯಲ್ಲೇ ದೊರಕಿದಂತಾಯಿತು. ಅವಳ ಬೆವರಿನ ಪರಿಮಳ ಮೂಗಿಗೆ ಬಡಿದು ಸುಗಂಧವನ್ನೇ ಮೂಸಿದಂತಾಗಿ ತಾನೆಲ್ಲೋ ಲೋಕವೆಲ್ಲೋ ಎಂಬಂತಾಗಿ ಬಾಯಿಂದ ಮಾತೇ ನಿಂತು ಹೋಯಿತು. ಮೀನಾಕ್ಷಿ ಆಗಾಗ ಅಂಗಡಿಗೆ ಬರುತ್ತಲೇ ಇರುತ್ತಿದ್ದಳು. ಹಂಗೆ ಬಂದಾಗಲೆಲ್ಲ ಶೇಕ್ರಿಯೇ ಗಲ್ಲಾದ ಮೇಲೆ ಕುಂತಿರುವುದು ಅಕಸ್ಮಿಕವೋ ಅಲ್ಲವೋ ಎನ್ನುವುದನ್ನು ಹೇಳುವುದು ದುಸ್ತರ. ಅಂತೂ ಅವನಿದ್ದಾಗ ಅವಳು ಬರುತ್ತಿದ್ದಳು ಇಲ್ಲಾ ಅವಳು ಬಂದಾಗೆಲ್ಲ ಇವನು ಇರುತ್ತಿದ್ದನು ಎನ್ನುವುದೇ ಸರಿ. ಮಾತನ್ನು ನೆಪ್ಪು ಮಾಡಿಕೊಳ್ಳುತ್ತಾ 'ಏನು' ಎಂಬಂತೆ ನೋಡಿದ. ಕಣ್ಣ ಪಾಂಗಿನಲ್ಲೇ ಕೊಲ್ಲುವಂತೆ 'ಬೆಲ್ಲ' ಅಂದಳು. 'ಎಷ್ಟು' ಅಂದ, ಅವನು ಒಂದು ಕೆಜಿ ತೂಗಿದ. 'ಅಯ್ಯೋ ನಾನು ಕೇಳಿದ್ದು ಅರ್ಧ' ಅಂದಳು ವಯ್ಯಾರ ಮಾಡುತ್ತಾ. 'ಇರಲಿ ತಗಾ, ಅರ್ಧಕ್ಕೇ ದುಡ್ಡು' ಅಂದ. ಮೀನಾಕ್ಷಿಗೆ ಅದು ಹಿಡಿಸದಿದ್ದರೂ ಅದನ್ನು ತೋರಿಸಿಕೊಳ್ಳಲಿಲ್ಲ, ಅದನ್ನೇನೂ ಬೇಡಾ ಅಂತಲೂ ಅನ್ನಲಿಲ್ಲ. ಈ ನಡಾವಳಿ ಬಹು ಕಾಲದಿಂದಲೂ ನಡೆದೇ ಬಂದಿದ್ದು , ಒಂದು ವೇಳೆ ಶೇಕ್ರಿಯ ಅಪ್ಪ ಭದ್ರಪ್ಪ ಗಲ್ಲಾದ ಮೇಲಿದ್ದಾಗ ಮಾತ್ರ ಶೇಕ್ರಿ ಪಿಟ್ಟನ್ನದೆ ಇರುತ್ತಿದ್ದ. ಅಂತೂ ಅವನು ಹೆಚ್ಚಿಗೆ ಕೊಡುವುದು ಇವಳು ಬ್ಯಾಡಾ ಅನ್ನುವುದು ತಿರು ತಿರುಗಿ ನಡೆಯುತ್ತಲೇ ಇತ್ತು. ಅವಳ ಮೇಲೆ ಮನಸ್ಸು ಬಿದ್ದು ಅವಳನ್ನು ನೋಡುವುದೇ ಮಾತಾಡುವುದೇ ಸ್ವರ್ಗ ಸುಖ ಅನ್ನುವಂಗಿತ್ತು ಶೇಕ್ರಿಯ ಹರೆಯದ ಹುಮ್ಮಸ್ಸು.

ಶೇಕ್ರಿ ಆಗಿನ್ನೂ ಬಿ.ಎ ಫೈನಲ್ ಸುಮಾರಾಗಿ ಪಾಸಾಗಿದ್ದ. ಮುಂದೆ ಯಾವುದಕ್ಕೂ ಹೋಗದೆ ಮನೆ, ತೋಟ ನೋಡಿಕೊಂಡು ಹೋಗುವುದೆಂದು ತೀರ್ಮಾನಿಸಿದ್ದ. ಅವನಪ್ಪನ ಆಸೆಯೂ ಅದೇ ಆಗಿತ್ತು. ಆದರೂ ಅವನೇನೂ ಪರ್ಮನೆಂಟಾಗಿ ಅಂಗಡಿಗೇ ಅಂಟಿಕೊಂಡು ಕೂಡದೆ ಗೌಡ್ರ ಜಯಂತ ಮತ್ತವನ ಪಟಾಲಮ್ಮಿನ ಭಾಗವಾಗಿದ್ದು ಪುಂಡು ಪೋಕರಿ ಜೋಕ್ ಮಾಡ್ತಾ ಹಾಯಾಗಿದ್ದ. ಜಯಂತನದೂ ಇದೇ ಹಣೇಬರ. ಮೇಲೆ ಸೀಯಂಗಿಲ್ಲ, ಕೆಳಗೆ ಒತ್ತಂಗಿಲ್ಲ ಅನ್ನುವುದು ಶೇಕ್ರಿಗೂ ಜಯಂತನಿಗೂ ಸಮಾ ಸಮಾ ಇತ್ತು. ಶೇಕ್ರಿ ಮತ್ತು ಜಯಂತ ಒಳ್ಳೆ ಗೆಳೆಯರು. ಅವರಿಬ್ಬರೂ ಒಂದೇ ಕಾಲೇಜಿನಲ್ಲಿ ಓದಿ ಬಂದವರು. ದುರ್ಗದಲ್ಲಿ ಓದುತ್ತಿರುವಾಗಲೇ ಕಾಲೇಜಿನ ಕೀಟ್ಲೆ ಕೆಲಸದಲ್ಲಿ ಹೆಸರಾದವರು. ಆದರೆ ಎಂದೂ ಗಡಿ ದಾಟಿದವರಲ್ಲ. ಸಿನಿಮಾ ನೋಡುತ್ತಿದ್ದರು. ಕನ್ನಡದ ರಾಜಕುಮಾರ, ಹಿಂದಿಯ ದೇವಾನಂದ ಅವರ ಮೆಚ್ಚಿನ ಹೀರೋಗಳು. ಸಿನಿಮಾದ ಹೀರೋ, ವಿಲನ್ ಥರ ನಾನಾ ಗೆಟಪ್ಪಲ್ಲಿ ಪೋಜು ಕೊಡೋದ್ರಲ್ಲಿ ಇಬ್ಬರೂ ನಿಸ್ಸೀಮರು. ಲಕ್ಷ್ಮೀ ಭವನದ ಖಾಲಿ ದೋಸೆ, ನಾರಣಪ್ಪನ ತುಪ್ಪದ ದೋಸೆ ಇಬ್ಬರಿಗೂ ಪ್ರಿಯ. ಜಯಂತನ ಬಳಿ ಯಾವಾಗಲೂ ದುಡ್ಡಾಡುತ್ತಿತ್ತು. ಮೊದಲೇ ಗೌಡಾಳಿಕೆ. ಒಂಥರಾ ಆ ಗತ್ತು ಸುಮಾರಾಗಿ ಜಯಂತನಿಗಿದ್ದರೂ ಅವನೆಂದೂ ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿರಲಿಲ್ಲ. ಒಳ್ಳೆಯ ರಸಿಕ ಮನೋಭಾವ ಜಯಂತನದು. ಶೇಕ್ರಿಯೂ ಸಮ ಸಮನಾಗಿದ್ದರೂ ಮೈಕಟ್ಟಿನಲ್ಲಿ ಜಯಂತನಿಗಿಂತ ಸುಮಾರೇ ಆದರೂ ಸುಂದರಾಂಗ. ಅವನ ಗುಂಗರುಗೂದಲು, ಆಕರ್ಷಕ ಕಪ್ಪು ಕಣ್ಣು, ತಾಮ್ರ ಬಣ್ಣ, ರಸಭರಿತ ಮಾತುಗಾರಿಕೆ, ಸಾಹಿತ್ಯದ ತಿಳಿವಳಿಕೆ ಇವೆಲ್ಲ ಅವನಿಗೆ ಕಳೆ ನೀಡಿದ್ದವು. ಜಯಂತನ ಕಲರೂ ಪರವಾಗಿಲ್ಲ ಅನ್ನುವಂಗೇ ಇತ್ತು. ಅವನ ಕೂದಲು ಪೊದೆಯಾಗಿ ಬೆಳೆದು ಅಡ್ಡಾದಿಡ್ಡಿ ಇದ್ದರೂ ಸಿನಿಮಾದ ಪಕ್ಕಾ ವಿಲನ್ ಥರವೇ ಕಾಣುತ್ತಿದ್ದ. ಆ ಕಾಲದ ಟೈಗರ್ ಪ್ರಭಾಕರ ಆಗಿನ್ನೂ ಸಿನಿಮಾಕ್ಕೆ ಎಂಟ್ರಿ ಕೊಟ್ಟಿದ್ದ. ಅವನನ್ನೇ ಹೆಚ್ಚು ಕಟ್ಲೆ ಹೋಲುವಂತಿದ್ದು ಅವನ